**1ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಚಾಮರಾಜನಗರ,**

**ಪೀಠಾಸೀನ ಕೊಳ್ಳೇಗಾಲ**

**ಎಸ್.ಸಿ.** **5033/2025**

| | | | | |
|---|---|---|---|---|
| **ಸಾಕ್ಷಿದಾರರ ಹೆಸರು** | : | ತಂಗವೇಲು | **ಪ್ರಮಾಣ ವಚನ ಭೋಧಿಸಿದ ದಿನಾಂಕ** | |
| **ತಂದೆ ಹೆಸರು** | : | ಚಿನ್ನಗೌಂಡರ್ | 08.04.2026 | |
| **ವಯಸ್ಸು** | : | 42 ವರ್ಷ | | |
| **ವೃತ್ತಿ** | : | ಜೆ.ಸಿ.ಬಿ ಚಾಲಕ | **ಫ್ರಾ.ಸಾಃ** | 09 |
| **ವಾಸ ಸ್ಥಳ** | : | ಗೋಪಿನಾಥಂ | **ಚಾ.ಸಾಃ** | 02 |

**ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ-**

ನನಗೆ ಚಾಸಾ 3 ಗೊತ್ತು. ಸುಮಾರು 3 ವರ್ಷಗಳ ಹಿಂದೆ ನಾನು ಜೆ.ಸಿ.ಬಿ ಕೆಲಸ ಮಾಡುತ್ತಿದ್ದಾಗ, ಪೋಲೀಸರು ಮಹಜರಿಗೆಂದು ನನ್ನನ್ನು ಕರೆಸಿದ್ದರು. ಕೊಕ್ಕರೆ ಹಳ್ಳ ಪ್ರದೇಶಕ್ಕೆ ಪೋಲೀಸರು ನನ್ನನ್ನು ಕರೆಸಿದ್ದರು. ಮಹಜರ್ ಸ್ಥಳದಲ್ಲಿ ಒಂದು ದೋಣಿ, 2 ಮದ್ದು ಗುಂಡುಗಳು, ಇತರ ವಸ್ತುಗಳು ಇದ್ದವು ಅವುಗಳು ನನಗೆ ನೆನಪಿಗೆ ಬರುತ್ತಿಲ್ಲ. ನಾನು ಮಹಜರಿಗೆ ಸಹಿ ಮಾಡಿರುತ್ತೇನೆ. ಮಹಜರ ಅನ್ನು ನಿಪಿ 2 ಎಂದು ಈಗಾಗಲೇ ಗುರುತಿಸಲಾಗಿದೆ. ಸಾಕ್ಷಿ ಸಹಿಯನ್ನು ನಿಪಿ 2(ಬಿ) ಎಂದು ಗುರುತಿಸಲಾಯಿತು. ಭಾವಚಿತ್ರಗಳನ್ನು ನಿಪಿ 3 ರಿಂದ 12 ಎಂದು ಈಗಾಗಲೇ ಗುರುತಿಸಲಾಗಿದೆ.

ಮರುದಿನ ಪೋಲೀಸರು ಅದೇ ಸ್ಥಳಕ್ಕೆ ನನ್ನನ್ನು ಪುನಃ ಕರೆದುಕೊಂಡು ಹೋಗಿದ್ದರು. ಆ ಸಮಯದಲ್ಲಿ ಪೋಲೀಸರು ಪುನಃ ಸ್ಥಳವನ್ನು ಪರಿಶೀಲಿಸಿದರು.

ನಾನು ಮಹಜರಿಗೆ ಸಹಿ ಮಾಡಿರುತ್ತೇನೆ. ಮಹಜರ ಅನ್ನು ನಿಪಿ 31 ಎಂದು ಈಗಾಗಲೇ ಗುರುತಿಸಲಾಗಿದೆ. ಸಾಕ್ಷಿ ಸಹಿಯನ್ನು ನಿಪಿ 31(ಬಿ) ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ- ಶ್ರೀ ಬಿ.ಎಸ್.ಆರ್ ವಕೀಲರಿಂದ**

ಅರಣ್ಯ ಇಲಾಖೆಯವರು ನನ್ನ ಜೆ.ಸಿ.ಬಿ ಮೂಲಕ ಆಗಾಗ ಕೆಲಸ ಮಾಡಿಸುತ್ತಾರೆ. ನಾನು ಅರಣ್ಯ ಇಲಾಖೆಯವರು ಮಹಜರಿಗೆಂದು ಕರೆದಾಗ ಹೋಗುತ್ತಿರುತ್ತೇನೆ. ಅರಣ್ಯ ಇಲಾಖೆಯವರ ಕೋರಿಕೆಯಂತೆ ನಾನು ಈ ಪ್ರಕರಣದಲ್ಲಿ ಮಹಜರ್ ಸಮಯದಲ್ಲಿ ಹಾಜರಿರುತ್ತೇನೆ. ಪೋಲೀಸರು ನನಗೆ ನೋಟಿಸ್ ಕೊಟ್ಟಿರುವುದಿಲ್ಲ. ಅರಣ್ಯ ಇಲಾಖೆಯವರಿಗೆ ಸಹಾಯವಾಗಲೀ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಸ್ಥಳಕ್ಕೆ ಹೋಗಿಲ್ಲ, ನಿಪಿ 2 ಮತ್ತು 31 ಕ್ಕೆ ಠಾಣೆಯಲ್ಲಿ ಸಹಿ ಮಾಡಿದ್ದೇನೆ ಎಂದರೆ ಸರಿಯಲ್ಲ. ಭಾವಚಿತ್ರಗಳನ್ನು ಪೋಲೀಸರು ಸೃಷ್ಟಿ ಮಾಡಿದ್ದಾರೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಎ ಒ

1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಾಮರಾಜನಗರ, ಪೀಠಾಸೀನ ಕೊಳ್ಳೇಗಾಲ